

ಮನೋಹರವಾದ ಹಜಾರ್ ಪರ್ವತ ಶ್ರೇಣಿ

# ಮರಳನಾಡಲ್ಲೊಂದು ಮಿನಿ ಜಲಾಶಯ

**ಮರುಳುಗೊಳಿಸುವ ಮರಳಿಗೆ ಪ್ರಸಿದ್ಧವಾದ ಶಾರ್ಜಾದ ಪರಿಸರದಲ್ಲಿ ಪುಟ್ಟದೊಂದು ಅಣೆಕಟ್ಟೆದೆ! ನಾಲ್ಕೂ ನಿಟ್ಟಿನಲ್ಲಿ ಸುತ್ತುವರಿದಿರುವ ಬೆಟ್ಟಸಾಲುಗಳಿಂದಾಗಿ ಈ ಜಲಾಶಯವು ವಿಶಿಷ್ಟ ಸೌಂದರ್ಯದಿಂದ ಕಂಗೊಳಿಸುತ್ತಿದೆ.**

**■ ಬಿ.ಎಂ. ಹನೀಫ್**

ಕಣ್ಣು ಹಾಯಿಸಿದಷ್ಟು ಉದ್ದಕ್ಕೂ ಮರಳರಾಶಿ ಮಾತ್ರ ಕಾಣುವ ಶಾರ್ಜಾ ಎಂಬ ಅರಬ್ ನಾಡಿನಲ್ಲಿ ಒಂದು ಪುಟ್ಟ ಅಣೆಕಟ್ಟು ಮತ್ತು ಜಲಾಶಯವಿದೆ ಎಂದಾಗ ನನಗೆ ಸಹಜವಾಗಿಯೇ ಅಚ್ಚರಿಯಾಯಿತು. ಅದರ ಹೆಸರು 'ಅಲ್ ರಫೀಸಾಹ್ ಡ್ಯಾಮ್'. ಒಂದು ದಶಕದಿಂದ ಶಾರ್ಜಾ ನಿವಾಸಿಯಾಗಿರುವ ನನ್ನ ತಮ್ಮನಿಗೆ 'ನೋಡಿಯೇ ಬಿಡೋಣ' ಎಂದೆ. ಶಾರ್ಜಾದಿಂದ ಹೊರಟ ನಮ್ಮ ಕಾರು ನಗರದ ಹೊರವಲಯಕ್ಕೆ ತಿರುಗಿಕೊಂಡು ಶಾರ್ಜಾ–ಖೊರ್‌ಫಕ್ಕಾನ್ ಹೆದ್ದಾರಿಯಲ್ಲಿ ಚಲಿಸತೊಡಗಿತು.

ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಒಕ್ಕೂಟದಲ್ಲಿ ದುಬೈಯಂತೆಯೇ ಇರುವ ಒಂದು ದೇಶ ಶಾರ್ಜಾ. ದುಬೈಯಷ್ಟು ಶ್ರೀಮಂತ ದೇಶವಲ್ಲದಿದ್ದರೂ ದೊರೆಗಳ ಉದಾರತೆಗೆ ಕೊರತೆಯಿಲ್ಲ. ಅಲ್ಲಿನ ಹೆದ್ದಾರಿಗಳನ್ನು ನೋಡಿದಾಗ ಬಹಳ ವರ್ಷಗಳ ಹಿಂದೆ ಲಾಲೂ ಪ್ರಸಾದ್ ಯಾದವ್ ಹೇಳಿದ ಹೇಮಮಾಲಿನಿಯ ಕೆನ್ನೆಯ ನೆನಪಾಗುವುದು ಸುಳ್ಳಲ್ಲ. ಚತುಷ್ಪಥ ಹೆದ್ದಾರಿಯ ಎರಡೂ ಕಡೆ ಅಜಗರದಂತೆ ಬಿದ್ದುಕೊಂಡಿರುವ ಮರಳರಾಶಿ. ನಡುನಡುವೆ ಕರಿಕಲ್ಲಿನ ಪರ್ವತ ಶ್ರೇಣಿಗಳು. ಮಧ್ಯೆ ಅಚಾನಕ್ಕಾಗಿ ಕಾಣಿಸುವ ಬಂಗಾರದ ಬಣ್ಣದ ಮರಳುಗಾಡು! ಹೆದ್ದಾರಿಯಲ್ಲಿ ಎಲ್ಲವೂ ರೇಸ್ ಕಾರ್‌ಗಳೇ. ಸ್ವಚ್ಛ, ಸುಭದ್ರ,



ಅಲ್ ರಫೀಸಾಹ್ ಅಣೆಕಟ್ಟು